

# ಹೆಲ್ಮೆಟ್‌ಗೂ ಬಂತು ವೈಪರ್

ಸುರಿಯುವ ಮಳೆಯಲ್ಲೂ ಬೈಕ್ ಸವಾರಿ ಸುಲಭವಾಗಿದೆ. ಹೆಲ್ಮೆಟ್ ಗಾಜಿಗೆ ಅಡ್ಡ ಬರುವ ನೀರನ್ನು ಬದಿಗೆ ತಳ್ಳಿ ಮುನ್ನೋಟದ ದೃಷ್ಟಿ ಸ್ಪಷ್ಟವಾಗುವಂತೆ ವೈಪರನ್ನು ವಿನ್ಯಾಸ ಮಾಡಲಾಗಿದೆ. ಹೆಲ್ಮೆಟ್‌ಗೆ ಅಳವಡಿಸುವ ಪುಟ್ಟ ಯಂತ್ರ ಜಡಿ ಮಳೆಯಲ್ಲೂ ರಸ್ತೆಯ ನೋಟವನ್ನು ಕದಲಿಸದೆ ಓಟವನ್ನು ಮುಂದುವರಿಸುತ್ತದೆ.

■ **ಸಂತೋಷ್ ರಾವ್ ಪೆರ್ಮುಡ**

ಜೂನ್ ತಿಂಗಳೆಂದರೆ ಮಾನ್ಸೂನ್ ಹಂಗಾಮ. ಮಳೆಗಾಲ ಪ್ರಾರಂಭವಾಯಿತೆಂದರೆ ದ್ವಿಚಕ್ರ ವಾಹನ ಸವಾರರು ರೈನ್ ಕೋಟ್‌ಗೂ ಪಾದಚಾರಿಗಳು ಛತ್ರಿಗೂ ಮೊರೆ ಹೋಗುತ್ತಾರೆ. ಮಳೆಗಾಲದಲ್ಲಿ ಬೈಕ್ ಸವಾರರ ಪಾಡಂತೂ ಹೇಳಿದರೆ ತೀರುವುದಿಲ್ಲ. ಸುರಿಯುವ ಮಳೆಯಲ್ಲಿ ರೈನ್ ಕೋಟ್ ಧರಿಸಿದರೂ, ಹೆಲ್ಮೆಟ್ ತೊಟ್ಟುಕೊಂಡರೂ ರಸ್ತೆ ಸ್ಪಷ್ಟವಾಗಿ ಕಾಣದೇ 'ದಾರಿ ಕಾಣದಾಗಿದೆ ರಾಘವೇಂದ್ರನೇ...' ಎಂದು ಗೊಣಗುತ್ತಾ ಬೈಕ್ ಅನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿ ನಿಲ್ಲಬೇಕಷ್ಟೆ. ತುರ್ತಾಗಿ ಸಾಗಬೇಕೆಂದಿದ್ದರೆ ಮಳೆಯನ್ನು ಲೆಕ್ಕಿಸದೆ ಬೈಕ್ ಸವಾರಿಯನ್ನು ಮುಂದುವರಿಸಬೇಕು. ಹೆಲ್ಮೆಟ್‌ನ ಗಾಜಿಗೆ ಎದುರಾಗುವ ಮಳೆ ಹನಿ ತಡೆಯಲು ಎಡಗೈ ಅಡ್ಡ ಹಿಡಿಯುತ್ತಾ, ಆಗಾಗ ಗಾಜನ್ನು ಒರೆಸುತ್ತಾ ಸರ್ಕಸ್ಸಿನ ಸವಾರಿಯನ್ನು ಮಾಡಬೇಕಾಗುತ್ತದೆ. ಅಂತಹ ಸಂಕಷ್ಟವನ್ನು ದೂರ ಮಾಡಲು ಕಾರಿನ ಗಾಜಿಗೆ ಅಳವಡಿಸಿರುವ ವೈಪರ್‌ನಂತೆಯೇ ಹೆಲ್ಮೆಟ್‌ಗೂ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು, ಸರಾಗವಾಗಿ ಮಳೆಯಲ್ಲೂ ಬೈಕ್ ಚಲಾಯಿಸಿಕೊಂಡು ಹೋಗಬಹುದಿತ್ತಲ್ಲ ಎಂದೆಲ್ಲ ಕನಸು ಕಾಣುತ್ತೇವೆ.

ಬೈಕ್ ಸವಾರರು ಧರಿಸುವ ಹೆಲ್ಮೆಟ್‌ಗೂ ವೈಪರ್ ಅಳವಡಿಕೆ ಸಾಧ್ಯವಿದೆಯೆಂದು ವಾಹನಗಳ ಬಿಡಿ ಭಾಗಗಳ ಉತ್ಪಾದನಾ ಸಂಸ್ಥೆಗಳು ಅನ್ವೇಷಣೆ ನಡೆಸಿ ಸವಾರರ ಕನಸನ್ನು ಸಾಕಾರಗೊಳಿಸಿದೆ. ವೈಫಿ, ಕಿಕ್ ಸ್ಟಾರ್ಟರ್ ಮತ್ತು ರೈನ್ ಪಾಲ್ ಎಂಬ ಹೆಸರಿನ ವಾಹನಗಳ ಬಿಡಿಭಾಗಗಳ ಉತ್ಪಾದನಾ ಸಂಸ್ಥೆಗಳು ಯಾಂತ್ರಿಕ ಉಪಕರಣವೊಂದನ್ನು ಹೆಲ್ಮೆಟ್ ಮುಂಭಾಗದ ಗಾಜಿಗೆ ಅಳವಡಿಸಿ ಅವುಗಳ ಮೂಲಕ ವೈಪರ್ ಕಾರ್ಯನಿರ್ವಹಿಸುವಂತೆ ಮಾಡುವ ಹೊಸ ತಂತ್ರಜ್ಞಾನವನ್ನು ಕಂಡುಹಿಡಿದಿವೆ. ಕಾರುಗಳ ವೈಪರ್‌ಗಳಲ್ಲಿ ಬಳಸಲಾಗುವ ತಂತ್ರಜ್ಞಾನದ ಮಾದರಿಯಲ್ಲೇ ಹೆಲ್ಮೆಟ್‌ಗಳಿಗೂ ಹೊಂದಿಕೆಯಾಗುವಂತೆ ವಿನ್ಯಾಸ ಮಾಡಲಾಗಿದೆ.

ಎಲೆಕ್ಟ್ರಿಕ್ ವೈಪರ್ ಡಿವೈಸ್ ನಿರ್ದಿಷ್ಟ ಮಾದರಿಯ ಹೆಲ್ಮೆಟ್‌ಗಳಿಗಷ್ಟೇ ಜೋಡಣೆಯನ್ನು ಮಾಡದೆ, ಎಲ್ಲಾ ವಿಧದ ಹೆಲ್ಮೆಟ್‌ಗಳಿಗೂ ಬೇಕೆಂದಾಗ ಅಳವಡಿಸಿ, ಬೇಡವೆಂದಾಗ ಬೇರ್ಪಡಿಸಿ ಇಡಲು ಸಾಧ್ಯವಿದೆ. ವೈಪರ್‌ಗಳನ್ನು ಹೆಲ್ಮೆಟ್ ಮುಂಭಾಗದ ಗಾಜಿನಿಂದ 0.5 ಇಂಚು ಮೇಲ್ಭಾಗಕ್ಕೆ ಅಳವಡಿಸಲಾಗುತ್ತದೆ. ಈ ವೈಪರ್ ಬೈಕ್ ಹ್ಯಾಂಡಲ್‌ಗೆ ಅಳವಡಿಸಲಾಗುವ ನಿಯಂತ್ರಣಾ ಉಪಕರಣದಿಂದ ಬ್ಲೂಟೂತ್ ಮೂಲಕ ನಿಯಂತ್ರಿಸಲಾಗುತ್ತದೆ. ಇದನ್ನು ಪ್ರಯಾಣವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಾಕಷ್ಟು ಚಾರ್ಜ್ ಮಾಡಿಟ್ಟುಕೊಳ್ಳಬೇಕು. ಹನ್ನೆರಡು ಗಂಟೆ ಚಾರ್ಜ್ ಮಾಡಿದಲ್ಲಿ ಗರಿಷ್ಠ ಮೂರು ಗಂಟೆಗಳ ಕಾಲ ಬಳಸಬಹುದು. ಇದಕ್ಕಾಗಿ ಪ್ರತ್ಯೇಕ ಬ್ಯಾಟರಿ ಬ್ಯಾಕಪ್ ಅಳವಡಿಸಿರುವುದರಿಂದ ಗರಿಷ್ಠ ವೇಗದಲ್ಲಿ ಬೈಕ್ ಚಲಾಯಿಸಿದರೂ ಅದರ ವೈಪರ್ ಸರಾಗವಾಗಿ ಕಾರ್ಯನಿರ್ವಹಿಸುತ್ತದೆ. ವೈಪರ್ ವೇಗವನ್ನೂ ಅನುಕೂಲಕ್ಕೆ ತಕ್ಕಂತೆ ನಿಯಂತ್ರಿಸಬಹುದು. ಅಂದರೆ ಸ್ವಿಚ್ ಮೂಲಕ ಸೆಕೆಂಡಿಗೆ ಒಂದು ಬಾರಿ ಅಥವಾ ಮೂರು ಸೆಕೆಂಡಿಗೆ ಒಂದು ಬಾರಿ ಹೆಲ್ಮೆಟ್‌ನ ಗಾಜನ್ನು ಸ್ವಚ್ಛಗೊಳಿಸುವಂತೆ ವೇಗವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

ಇದರಲ್ಲಿ ವೈಪರ್ ನಿರಂತರವಾಗಿ ಬಳಸಿದಲ್ಲಿ (ಸೆಕೆಂಡ್‌ಗೆ ಒಂದು ಬಾರಿ) ಸುಮಾರು 90 ನಿಮಿಷಗಳ ಕಾಲ ಮತ್ತು ವೈಪರ್ ಬಿಟ್ಟು ಬಿಟ್ಟು ಬಳಸಿದಲ್ಲಿ (ಎರಡು ಸೆಕೆಂಡ್‌ಗೆ ಒಂದು ಬಾರಿ) ಚಲಿಸುವಂತೆ ಬಳಸಿದಲ್ಲಿ 180 ನಿಮಿಷಗಳ ಕಾಲ ಬಳಸಲು ಸಾಧ್ಯವಾಗುವಂತೆ ಬ್ಯಾಟರಿ ಬ್ಯಾಕ್ ಅಪ್ ಒದಗಿಸಲಾಗಿದೆ. ಹೆಲ್ಮೆಟ್ ಗಾಜಿನಲ್ಲಿ ಗಾಢವಾದ ಕೊಳೆ ಅಥವಾ ಧೂಳು ಅಂಟಿಕೊಂಡಲ್ಲಿ ಹೆಲ್ಮೆಟ್ ಒಳಗೆ ಶೇಖರಿಸಿಡಲಾದ ನೀರು ಹೆಲ್ಮೆಟ್ ಗಾಜಿಗೆ ಸ್ಪ್ರೇ ಆಗಿ ಸ್ವಚ್ಛಗೊಳಿಸುವಂತೆ ತಯಾರಿಸಲಾಗಿದೆ. ವೈಪರ್ ಸಾಧನದ ಒಟ್ಟು ತೂಕ ಕೇವಲ 150 ಗ್ರಾಂ. ವೈಪರ್ ಚಾಲನೆಯಲ್ಲಿ ಇರುವಾಗ ಡಿವೈಸ್‌ಗೆ ಅಳವಡಿಸಲಾದ ಎಲ್‌ಇಡಿ ಲೈಟ್ ಕತ್ತಲಿನ ಪ್ರಯಾಣದಲ್ಲೂ ಹೆಲ್ಮೆಟ್‌ಗೆ ಅಳವಡಿಸಬಹುದು. ಹೆಲ್ಮೆಟ್ ಗಾಜಿನಲ್ಲಿ ತೀರಾ ಗೀಚುಗಳಿದ್ದಲ್ಲಿ ಈ ಡಿವೈಸ್ ಅಷ್ಟು ಚೆನ್ನಾಗಿ ಕಾರ್ಯನಿರ್ವಹಿಸದು.

ಜೂನ್ ತಿಂಗಳ ಪ್ರಾರಂಭದಲ್ಲಿ ಹೆಲ್ಮೆಟ್ ಸಹಿತ ವೈಪರ್‌ಗಳ ಮಾರಾಟವನ್ನು ಪ್ರಾರಂಭಿಸುವ ಉದ್ದೇಶವನ್ನು ಆ ಕಂಪನಿಗಳು ಹೊಂದಿವೆ. ಆರಂಭಿಕವಾಗಿ ತಮ್ಮ ಗ್ರಾಹಕರಿಗೆ ಆಫರ್ ರೂಪದಲ್ಲಿ 50% ಡಿಸ್ಕೌಂಟ್ ನೀಡುವುದಾಗಿ ಅವು ಘೋಷಿಸಿವೆ. ಕಿಕ್ ಸ್ಟಾರ್ಟರ್ ಹೆಲ್ಮೆಟ್ ವೈಪರ್ ಡಿವೈಸ್ ಮೇಲೆ ಗರಿಷ್ಠ ಒಂದು ವರ್ಷದ ವಾರಂಟಿಯನ್ನು ನೀಡಲಾಗುತ್ತಿದೆ. ಬೈಕ್ ಚಲಾಯಿಸುವ ಸಂದರ್ಭದಲ್ಲಿ ವೈಪರ್ ಸಹಿತ ಹೆಲ್ಮೆಟ್ ಧರಿಸಿದಲ್ಲಿ ವೈಪರ್ ಅಡ್ಡ ಬರುವುದರಿಂದ ಪ್ರಯಾಣ ಎಷ್ಟು ಸುರಕ್ಷಿತ ಎಂಬ ಪ್ರಶ್ನೆಯೂ ಸವಾರರಲ್ಲಿ ಮೂಡಬಹುದು. ವೈಪರ್ ಮೋಟಾರ್ ತಿರುಗುವಾಗ ಉಂಟಾಗುವ ಶಬ್ದ ಕಿರಿಕಿರಿ ಎನಿಸಬಹುದು. ಒಟ್ಟಾರೆ ಮಳೆಯಲ್ಲಿ ದ್ವಿಚಕ್ರವಾಹನ ಸವಾರಿ ಸುಗಮ ಮಾಡುವ ದೃಷ್ಟಿಯಲ್ಲಿ ಆವಿಷ್ಕರಿಸಿರುವ ಈ ಯಂತ್ರ ಈಗಾಗಲೇ ಮಾರುಕಟ್ಟೆ ಪ್ರವೇಶಿಸುತ್ತಿದ್ದು, ಆನ್‌ಲೈನ್‌ನಲ್ಲೂ ಲಭ್ಯ ಎನ್ನಲಾಗಿದೆ. ■